'ನೊಣ'ವನ್ನಾಗಿ ಮಾಡು.

ಶ್ರೀ ಅಯ್ಯಪ್ಪಾ, ಪುರುಷೋತ್ತಮನನ್ನು ಒಂದು 'ನೊಣ'ವಾಗಿ ಮಾರ್ಪಡಿಸು.

ಪರಮಕಾರುಣ್ಯನಾದ ದೇವರೇ, ಪುರುಷೋತ್ತಮನ ವಿನೀತವಾದ ಈ ಆಸೆಯನ್ನು ನೆರವೇರಿಸಿಕೊಡು ತಂದೆ.

ಪುರುಷೋತ್ತಮನಿಗೆ ಒಂದು 'ನೊಣ'ವಾಗಬೇಕಂತೆ.

ಒಬ್ಬೊಬ್ಬರಿಗೂ ಒಂದೊಂದು ಆಸೆ ಇರುತ್ತದೆ. ಒಬ್ಬನಿಗೆ ಲಾಟರಿ ಹೊಡಿಯಬೇಕೆಂಬ ಆಸೆ. ಮತ್ತೊಬ್ಬನಿಗೆ ಸುಂದರವಾಗಿರುವ ಹೆಂಡತಿ ಬೇಕೆಂಬ ಆಸೆ. ಮತ್ತೆ ಕೆಲವರಿಗೆ ಸಂತಾನ ಪ್ರಾಪ್ತಿಯ ಆಸೆ. ಅಧಿಕಾರದಲ್ಲಿ ಉತ್ತುಂಗಕ್ಕೇರುವ ಆಸೆ ಇರುವವರೂ ಬಹಳಷ್ಟು ಮಂದಿ ಇದ್ದಾರೆ.

ದಯಾಪರನಾದ ದೇವರು ಅವರೆಲ್ಲರ ಆಸೆಯನ್ನು ನೆರವೇರಿಸುತ್ತಿದ್ದಾನೆ. ಹಾಗಿಲ್ಲದಿದ್ದಲ್ಲಿ ಜೀವನಪೂರ್ತಿ ಕುದುರೆಗಾಡಿ ಓಡಿಸುತ್ತಿದ್ದ ಮಾಧವನಿಗೆ ಇಂತಹ ಮಹಾಭಾಗ್ಯ ಹೇಗೆ ಪ್ರಾಪ್ತವಾಗುತ್ತಿತ್ತು.

ಅಬೂಬಕರಿನ ಪೆಟ್ಟಿಗೆ ಅಂಗಡಿಯಿಂದ ಒಂದು ರೂಪಾಯಿಯ ಲಾಟರಿ ಟಿಕೆಟ್ ಖರೀದಿಸಿ ಸೊಂಟದಲ್ಲಿ ಸಿಕ್ಕಿಸಿಕೊಂಡು ನಡೆಯುತ್ತಿರುವಾಗ ಮಾಧವನು ದೇವರಲ್ಲಿ ಬೇಡಿಕೊಂಡ:

"ಓ! ದೇವರೇ, ನನಗೊಂದು ಸಲ ಲಾಟರಿ ಭಾಗ್ಯ ದೊರಕಿಸು ದೊರೆಯೇ..."

ಪರಮ ಕಾರುಣ್ಯಮಯಿಯಾದ ದೇವರು ಮಾಧವನ ಆಸೆಯನ್ನು ತೀರಿಸದೆ ಇರಲಿಕ್ಕೆ ಸಾಧ್ಯವೇ? ಮಾಧವನ ಆಸೆ ಮಾತ್ರವಲ್ಲ. ಆ ಹಲ್ಲುಬ್ಬ ಭಾಸ್ಕರನೂ ಆಸೆ ಪಟ್ಟಿದ್ದ: ತನಗೂ ಸುಂದರಿಯಾದ ಹೆಂಡತಿಯೇ ಬೇಕು ಅಂತ. ಭಾಸ್ಕರನ ಆಸೆ ದೇವರ ಮನಸ್ಸನ್ನು ಮುಟ್ಟಿದ್ದೆ ತಡ, ದೇವರು ಸುಂದರಿಯಾದ ಹೆಂಡತಿಯನ್ನು ಬೀಸಿ ಒಗೆದ. ಮುತ್ತು ಪೋಣಿಸಿದಂಥ ಹಲ್ಲುಗಳು, ಧಾರಾಳ ತಲೆಗೂದಲು ಇರುವ ಅಪ್ರತಿಮವಾದ ಸುಂದರಿಯನ್ನೇ ನೀಡಿದ.

ಗೋಪಾಲ ಮಾಸ್ತರರು ಸಹ ಆಸೆಪಟ್ಟಿದ್ದರು:

"ನನಗೆ ಹುಟ್ಟುವ ಮಗು ಗಂಡಾಗಿದ್ದರೆ..." ಎಂದು.

ಗೋಪಾಲ ಮಾಸ್ತರರ ಹೆಂಡತಿ ಹೆತ್ತಿದ್ದು ಗಂಡು ಮಗುವಾಗಿತ್ತು. ಮಾಧವನನ್ನು, ಭಾಸ್ಕರನನ್ನು, ಗೋಪಾಲ ಮಾಸ್ತರರನ್ನು ನೇರವಾಗಿ ಪ್ರಸಾದಿಸಿದ ದೇವರು, ನಮ್ಮ ಪುರುಷೋತ್ತಮನನ್ನು ನೇರವಾಗಿ ಪ್ರಸಾದಿಸದೇ ಇರಲು ಸಾಧ್ಯವೇ?

ಪುರುಷೋತ್ತಮನಿಗೆ ಒಂದೇ ಒಂದಾಸೆ.

ಪುರುಷೋತ್ತಮನಿಗೆ ಒಂದು 'ನೊಣ'ವಾಗ ಬೇಕೆಂಬ ಆಸೆ.

ಒಂದು 'ನೊಣ'ವಾಗಬೇಕಂಬ ಆಸೆ ಪುರುಷೋತ್ತಮನ ತಲೆಯೊಳಕ್ಕೆ ನಿನ್ನೆತಾನೆ ಸೇರಿಕೊಂಡಿತ್ತು. ನಿನ್ನೆಯಷ್ಟೆ ಆಗಿದ್ದರೂ ಆ ಆಸೆ ಎಷ್ಟೋ ವರ್ಷಗಳಿಂದ ತನ್ನಲಿದೆ ಎನ್ನುವ ಭಾವನೆ ಅವನಲ್ಲಿತ್ತು. ಆ ಆಸೆಯೆಂಬ ಬೆಂಕಿಗೆ ಅಷ್ಟೊಂದು ಕಾವು ಇತ್ತು. ಹೊಳಪೂ ಇತ್ತು.

"ವಸಂತ ಇಲ್ಲವಾ?..."

ದಿನಪತ್ರಿಕೆ ಓದುತ್ತಿದ್ದ ಗೋಪಾಲ ಮಾಸ್ತರು ತಲೆಎತ್ತಿ ಕನ್ನಡಕದೊಳಗಿನಿಂದ ನೋಡಿದರು:

"ಯಾರೂ! ಓ! ಪುರುಷೋತ್ತಮನೋ? ಏನು ಮಗೂ, ಬೆಳಗ್ಗೆ ಇಷ್ಟೊತ್ತಿಗೆ ಬಂದಿದಿಯಾ!"

ಗೋಪಾಲ ಮಾಸ್ತರು ಕುರ್ಚಿಯಲ್ಲಿ ಕಾಲುಚಾಚಿ ಆರಾಮಾಗಿ ಕುಳಿತುಕೊಂಡರು.

"ಕುಳಿತುಕೋ. ಲಕ್ಷ್ಮಿ, ನೋಡಿಲ್ಲಿ ಯಾರು ಬಂದಿದಾರೆ?..."

ಒಳಗಿನಿಂದ ಉತ್ತರ ಬರಲಿಲ್ಲ.

"ಅವಳು ಬಾವಿಕಟ್ಟೆ ಹತ್ತಿರ ಇರಬೇಕು..."